# ನಿಮ್ಮೊಡನೆ

## ಆರೋಗ್ಯ ಸೇವೆ: ಮೂಲ ಸೌಕರ್ಯ ಹೆಚ್ಚಳಕ್ಕೆ ಸಿಗಲಿ ಆದ್ಯತೆ, ಸರ್ಕಾರಕ್ಕೆ ಬೇಕು ಬದ್ಧತೆ

ಅಭಿವೃದ್ಧಿ ಕಾಮಗಾರಿಗಳು ಕಮಿಷನ್ ದಂಧೆಯ ಸ್ವರೂಪ ಪಡೆದಿರುವುದು ಗುಟ್ಟಿನ ವಿಷಯವಾಗಿ ಉಳಿದಿಲ್ಲ. ರಾಜಕಾರಣಿಗಳು, ಅಧಿಕಾರಿಗಳು ಮತ್ತು ಗುತ್ತಿಗೆದಾರರ ದುಷ್ಟಕೂಟ ಇದರ ಸೂತ್ರ ಹಿಡಿದಿದೆ. ಆಸ್ಪತ್ರೆ ಕಟ್ಟಡಗಳನ್ನಾದರೂ ಶಿಸ್ತುಬದ್ಧವಾಗಿ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತಹ ಇಚ್ಛಾಶಕ್ತಿಯನ್ನು ಸರ್ಕಾರ ತೋರಬೇಕಾಗಿದೆ.

ಹಾವೇರಿ ಜಿಲ್ಲಾ ಆಸ್ಪತ್ರೆ ಕಟ್ಟಡದ ದುಃಸ್ಥಿತಿಯು ನಮ್ಮ ಆರೋಗ್ಯ ವ್ಯವಸ್ಥೆಯ ಅಧ್ವಾನಗಳ ಒಂದು ಮಿನುಗುನೋಟವನ್ನು ನಮ್ಮ ಎದುರು ತೆರೆದಿಡುತ್ತದೆ. ಆಸ್ಪತ್ರೆಗೆ ದಾಖಲಾದವರ ಪಾಡು ಪ್ರವಾಹ ಸಂತ್ರಸ್ತರ ಪಾಡಿನಂತಾಗಿರುವುದು ವರದಿಯಾಗಿದೆ. ರೋಗಿಗಳು ಅಲ್ಲಿ ಅನುಭವಿಸುತ್ತಿರುವ ಯಾತನೆಯನ್ನು ಕಟ್ಟಿಕೊಟ್ಟಿರುವ ಆ ವಿಶೇಷ ವರದಿಯನ್ನು ಓದಿದ ಯಾರಿಗೇ ಆಗಲಿ, ಪ್ರವಾಹ ಸಂತ್ರಸ್ತರಿಗೆ ತಾತ್ಕಾಲಿಕವಾಗಿ ಉಳಿದುಕೊಳ್ಳಲು ತೆರೆಯುವ ಕಾಳಜಿ ಕೇಂದ್ರಗಳ ದುಃಸ್ಥಿತಿಗೂ ಈ ಆಸ್ಪತ್ರೆಯ ಸ್ಥಿತಿಗೂ ಹೆಚ್ಚಿನ ವ್ಯತ್ಯಾಸ ಇದ್ದಂತಿಲ್ಲ ಎಂಬುದು ಮನವರಿಕೆಯಾಗುತ್ತದೆ!

ಅತ್ತ ಮಳೆ, ಶೀತಗಾಳಿಯ ಜೋರು. ಆಸ್ಪತ್ರೆಯ ವಾರ್ಡ್‌ಗಳಲ್ಲಿ ಚಾವಣಿಯಿಂದ ತೊಟ್ಟಿಕ್ಕುವ ನೀರು, ಒದ್ದೆಯಾದ ಗೋಡೆಗಳು, ಮುರುಕಲು ಕಿಟಕಿ, ನೀರು ನಿಂತ ನೆಲ.  ಇಂತಹ ಕಡೆ ಗರ್ಭಿಣಿಯರು, ಬಾಣಂತಿಯರು, ನವಜಾತ ಶಿಶುಗಳು, ವಯೋವೃದ್ಧರಿಗೆ ವೈದ್ಯೋಪಚಾರ. ರೋಗ ಗುಣವಾಗುವುದಿರಲಿ, ಉಲ್ಬಣಿಸಲು ಏನೆಲ್ಲ ಬೇಕೋ ಅವುಗಳೆಲ್ಲವೂ ವ್ಯವಸ್ಥೆಯ ನಿರ್ಲಕ್ಷ್ಯದಿಂದಾಗಿ ಅಲ್ಲಿ ಆವರಿಸಿಕೊಂಡಂತೆ ಭಾಸವಾಗುತ್ತದೆ.

ನವಜಾತ ಶಿಶುಗಳ ತೀವ್ರ ನಿಗಾ ಘಟಕವೂ ಸೋರುತ್ತಿದೆ ಎಂದರೆ ಎಂತಹ ದಯನೀಯ ಸ್ಥಿತಿ! ನವಜಾತ ಶಿಶುಗಳನ್ನು ಮತ್ತು ಎಳೆಯ ಮಕ್ಕಳನ್ನು ಹೆಚ್ಚು ಜೋಪಾನವಾಗಿ ಆರೈಕೆ ಮಾಡಬೇಕು. ಏಕೆಂದರೆ ಅವುಗಳ ದೇಹದಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುತ್ತದೆ. ಈ ಸೂಕ್ಷ್ಮ ಸಂಗತಿಯು ಅಕ್ಷರ ಜ್ಞಾನವಿಲ್ಲದ ಅಜ್ಜಿಯರಿಗೂ ಗೊತ್ತು. ಆದರೆ, ನಮ್ಮ ವೈದ್ಯ ವ್ಯವಸ್ಥೆಗೆ ಅದರ ಪರಿವೆಯೇ ಇಲ್ಲದಿರುವುದು ಅತ್ಯಂತ ನೋವಿನ ಸಂಗತಿ.

250 ಹಾಸಿಗೆಗಳ ಸಾಮರ್ಥ್ಯದ ಈ ಜಿಲ್ಲಾ ಆಸ್ಪತ್ರೆಯನ್ನು 350 ಹಾಸಿಗೆಯ ಮೇಲ್ದರ್ಜೆಗೆ ಏರಿಸುವ ಸಲುವಾಗಿ ಕಾಮಗಾರಿ ನಡೆಸಲಾಗುತ್ತಿದೆ. ಅದರ ಅಡ್ಡಪರಿಣಾಮ ಈ ಅವ್ಯವಸ್ಥೆ! ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುತ್ತಿರುವುದು ಮತ್ತು ಅದಕ್ಕಾಗಿ ಕಟ್ಟಡ ಕಾಮಗಾರಿ ನಡೆಸುತ್ತಿರುವುದು ಸ್ವಾಗತಾರ್ಹ. ಆದರೆ ಕಾಮಗಾರಿ ಹೆಸರಿನಲ್ಲಿ ಮಕ್ಕಳು, ಗರ್ಭಿಣಿಯರು, ಬಾಣಂತಿಯರು, ವೃದ್ಧರ ಆರೋಗ್ಯ ಮತ್ತು ಜೀವದ ಜೊತೆ ಚೆಲ್ಲಾಟ ಆಡುವುದು ಅಕ್ಷಮ್ಯ.

ಮಳೆಋತುವಿನ ಬಗ್ಗೆ ನಮಗೆ ಸ್ಪಷ್ಟ ತಿಳಿವಳಿಕೆ ಇದೆ. ನವಜಾತ ಶಿಶುಗಳಿಂದ ಹಿಡಿದು ಹಣ್ಣಾದ ವೃದ್ಧರವರೆಗೆ ಎಲ್ಲರನ್ನೂ ಉಪಚರಿಸಬೇಕಾದ ಆಸ್ಪತ್ರೆಯೊಂದರ ಕಟ್ಟಡವನ್ನು ಸುಸ್ಥಿತಿಯಲ್ಲಿ ಇರಿಸಬೇಕಾದುದು ಎಷ್ಟು ಮುಖ್ಯ ಎಂಬುದರ ಬಗೆಗೂ ಗೊತ್ತಿದೆ. ಅದರಲ್ಲೂ ಮಳೆಗಾಲವು ಮತ್ತಷ್ಟು ಹೆಚ್ಚು ನಿಗಾ ಬಯಸುವಂಥ ಅವಧಿ. ರೋಗಿಗಳಿಗೆ ಬೆಚ್ಚನೆಯ ವಾತಾವರಣ ಒದಗಿಸಬೇಕಾದುದು ಅಗತ್ಯ. ಅಂಥ ಸಂದರ್ಭದಲ್ಲಿ ಚಾವಣಿಗೆ ತೂತು ಕೊರೆದರಂತೆ, ಪಿಲ್ಲರ್ ಕೂರಿಸಲು ಸಿಮೆಂಟ್ ಕಿತ್ತುಹಾಕಿದರಂತೆ, ಹಾಗಾಗಿ ಇಡೀ ಆಸ್ಪತ್ರೆ ತೊಟ್ಟಿಕ್ಕುತ್ತಿದೆ ಎಂಬ ಮಾತುಗಳು ಯಾವ ಕಾರಣಕ್ಕೂ ಸಮರ್ಥನೆಯಾಗಲಾರವು. ಬದಲಾಗಿ, ಉಸ್ತುವಾರಿಗಳ ಉಡಾಫೆ ಧೋರಣೆಯನ್ನಷ್ಟೇ ಧ್ವನಿಸುತ್ತವೆ.

ಆಸ್ಪತ್ರೆಯ ಈ ಅವ್ಯವಸ್ಥೆಯನ್ನು ಮಾಧ್ಯಮಗಳು ಬಯಲುಗೊಳಿಸಿದ್ದಕ್ಕೆ ಹುಳುಕುಗಳು ಹೊರಗೆ ಬಂದವು. ಆಸ್ಪತ್ರೆಗೆ ಮುಖ್ಯಮಂತ್ರಿ ಖುದ್ದು ಭೇಟಿ ನೀಡಿ ಪರಿಶೀಲಿಸಿದರು. ಎಂಜಿನಿಯರ್ ಒಬ್ಬರ ಅಮಾನತಿಗೆ ಆದೇಶಿಸಿದರು. ಯಾರೋ ಒಬ್ಬರನ್ನು ಅಮಾನತುಗೊಳಿಸುವುದರಿಂದ ಈ ಬಗೆಯ ಅವ್ಯವಸ್ಥೆಗಳೆಲ್ಲವೂ ಸರಿಹೋಗುವುದಿಲ್ಲ. ಅಧಿಕಾರಸ್ಥರ ಕಣ್ಣು ತೆರೆಸಲು ಇವು ಕಾರಣವಾಗಬೇಕು. ನಮ್ಮ ಆದ್ಯತೆಗಳನ್ನು ಮರುರೂಪಿಸಲು, ಸಮರ್ಪಕವಾಗಿ ಗುರುತಿಸಿ, ಅನುಷ್ಠಾನಗೊಳಿಸಲು ಪ್ರೇರಣೆಯಾಗಬೇಕು.

ರಸ್ತೆ, ಕಟ್ಟಡ ಸೇರಿದಂತೆ ಎಲ್ಲ ಬಗೆಯ ಕಾಮಗಾರಿಗಳು ನಮ್ಮಲ್ಲಿ ಕಮಿಷನ್ ದಂಧೆಯ ಸ್ವರೂಪ ಪಡೆದಿರುವುದು ಗುಟ್ಟಿನ ವಿಷಯವಾಗಿ ಉಳಿದಿಲ್ಲ. ರಾಜಕಾರಣಿಗಳು, ಅಧಿಕಾರಿಗಳು ಮತ್ತು ಗುತ್ತಿಗೆದಾರರ ದುಷ್ಟಕೂಟ ಇದರ ಸೂತ್ರ ಹಿಡಿದಿದೆ. ಬೇಕಾದಾಗ, ಬೇಕಾದವರಿಗೆ ಕಾಮಗಾರಿ ವಹಿಸುವಂತಹ ಪರಿಪಾಟ ಇದೆ. ಪೂರ್ಣಗೊಳಿಸಲು ಕಾಲಮಿತಿ ವಿಧಿಸುತ್ತಾರಾದರೂ ಅದು ಪಾಲನೆಯಾಗುವುದು ವಿರಳಾತಿವಿರಳ. ಆಸ್ಪತ್ರೆ ಕಟ್ಟಡಗಳ ಕಾಮಗಾರಿಗಳನ್ನಾದರೂ ಶಿಸ್ತುಬದ್ಧವಾಗಿ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತಹ ಇಚ್ಛಾಶಕ್ತಿಯನ್ನು ಸರ್ಕಾರ ತೋರಬೇಕಾಗಿದೆ.

ನಮ್ಮ ಆರೋಗ್ಯ ಸೇವಾ ವ್ಯವಸ್ಥೆಯ ಸ್ಥಿತಿ ಶೋಚನೀಯವಾಗಿದೆ. ವೈದ್ಯರು ಮತ್ತು ಸಿಬ್ಬಂದಿಯ ಕೊರತೆ ಎಲ್ಲೆಡೆ ಕಣ್ಣಿಗೆ ರಾಚುವಂತಿದೆ. ಒಂದು ವೇಳೆ ವೈದ್ಯರಿದ್ದರೆ, ಔಷಧ–ಉಪಕರಣಗಳು ಇರುವುದಿಲ್ಲ, ಉಪಕರಣ ಇದ್ದರೆ ಅದನ್ನು ಬಳಸುವಂಥ ಪರಿಣತರು ಇರುವುದಿಲ್ಲ. ‘ಗ್ರಾಮಾಂತರ ಪ್ರದೇಶಗಳಲ್ಲಿ ಈ ಸ್ಥಿತಿ ಮತ್ತಷ್ಟು ದಯನೀಯ. ಮೂಲ ಸೌಕರ್ಯ ಹೆಚ್ಚಿಸುವ ಕೆಲಸವನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕು’ ಎಂದು ಸಂಸತ್ತಿನ ಸ್ಥಾಯಿ ಸಮಿತಿಯೇ ಹೇಳಿದೆ. ಆದರೂ ಆಡಳಿತದ ಹೊಣೆ ಹೊತ್ತವರ ಕಣ್ಣಿಗೆ ಆ ನ್ಯೂನತೆಗಳು ಬಿದ್ದಂತೆಯೇ ಇಲ್ಲ. ಆ ಕೊರತೆಗಳನ್ನು ನೀಗಿಸಲು ಸರ್ಕಾರ ಈಗಲಾದರೂ ಬದ್ಧತೆ ತೋರಬೇಕು.

■ ಎನ್. ಉದಯಕುಮಾರ್



ಈಶ್ವರ್